ವ್ಯಾಟ್ಸ್‌ಆ್ಯಪ್ ಮೆಸೇಜ್ ಮೂಲಕ ಕಳಿಸಿದ್ದಾಳೆ. ಅವಳ ಫೋನ್ ಮೆಸೇಜಸ್ ಕಲೆಕ್ಟ್ ಮಾಡಿದ್ದೀವಿ, ನಮ್ಮತ್ರನೇ ಇದೆ. ತೋರುಸ್ಲಾ? ಅದಕ್ಕೆ ರಿಪ್ಲೈ ಕೂಡ ಮಾಡಿದ್ದೀಯ. ನೀನು, ಅವತ್ತು ಬೆಳಿಗ್ಗೆ ಆಗಲೇ ನಿನ್ನ ವಕೀಲರ ಹತ್ತಿರ ಮಾತಾಡಿದ್ದೀನಿ ಅಂತ. ಅದರಿಂದ ನಿನ್ನ ಮರ್ಯಾದೆನೇ ಹೋಗುತ್ತೆ ಅಂತ ಅವರು ಹೇಳಿದ್ದಾರೆ ಅಂತಾನು. ಕುಮಾರ್, ಇವನ ಫೋನ್ ಚೆಕ್ ಮಾಡಿ, ಆಲ್ ಎಕ್ಸ್‌ಚೇಂಜಸ್ ಆನ್ ದಟ್ ಡೆ'.

ಕುಮಾರ್ ಫೋನನ್ನು ಚೆಕ್ ಮಾಡಿ, 'ಎಲ್ಲಾನು ಇದೆ ಸಾರ್'.

'ಆ ಫೋನು ಸೀಜ್ ಮಾಡಿ ಕುಮಾರ್. ದಿನೇಶ್ ನೀನು ಅಮ್ಮುಗೆ ಸೀರಿಯಲ್ಲಲ್ಲಿ, ಸಿನಿಮಾದಲ್ಲಿ ಅವಕಾಶಗಳನ್ನು ಮಾಡ್ದೆ, ಅದಕ್ಕೋಸ್ಕರ ಅವಳು ನಿನಗೆ ಚಿರಋಣಿಯಾಗಿರಬೇಕು, ನೀನು ಹೇಳಿದ ಹಾಗೆ ಕೇಳಬೇಕು ಅನ್ನೋ ನಿರೀಕ್ಷೆ ಇತ್ತು, ಆದರೆ ಅಮ್ಮು ಸ್ವಾಭಿಮಾನಿ, ಯಾವುದೇ ಕಾರಣಕ್ಕೂ ಅವಳನ್ನು ಅವಳು ಮಾರಿಕೊಳ್ಳೊಲ್ಲ ಎಂದು ಅರಿತ ನಿನಗೆ ಅವಳ ಮೇಲೆ ಕೋಪ. ಕೇಳುಸ್ಕೊ, ಈಗ ಮುಖ್ಯವಾದ ವಿಷಯಕ್ಕೆ ಬರ್ತೀನಿ. ಅಮ್ಮು ಅವಳು ಹೇಳಿದ ರೀತಿನೇ, ಪ್ರೆಸ್‌ಮೀಟ್ ಕರೆದು, ನಂತರ ಪೊಲೀಸ್ ಕಂಪ್ಲೇಂಟು ಕೊಟ್ಟಿದ್ದರೆ, ನಿನ್ನ ಮಾನ ಬೀದಿಪಾಲಾಗುತ್ತಿತ್ತು. ಅಷ್ಟೇ ಅಲ್ಲ, ನೀನು ಕನಿಷ್ಠ ಪಕ್ಷ ಆರು ವರ್ಷ ಜೈಲಿಗೆ ಹೋಗಬೇಕಾಗ್ತಿತ್ತು. ಅಲ್ಲದೆ ಈ ಕಾರಣಕ್ಕಾಗಿ, ಅಮ್ಮು ನಿನ್ನ ಸೀರಿಯಲ್‌ನಿಂದ ಹೊರಬಂದಿದ್ದರೆ, ನಿನ್ನ ಸೀರಿಯಲ್ ಮಗುಚಿಕೊಂಡು ಎಲ್ಲಾ ಸೇರಿ ನಿನ್ನ ಕಥೇನೆ ಪೂರ್ತಿ ಮುಗೀತಿತ್ತು. ಮಾರನೇ ದಿನ ಇಷ್ಟೆಲ್ಲಾ ಅನಾಹುತ ನಡೆಯಬಹುದೆಂದು ಹೆದರಿದ್ದ ನೀನು, ಅದರ ಹಿಂದಿನ ದಿನಾನೆ ಅಮ್ಮುನ ಕೊಲೆ ಮಾಡ್ದೆ, ಹೌದಾ? ನೀನು ಅಮ್ಮು ಮನೆಗೆ ಎಲ್ಲಿಂದ ಎಂಟ್ರಿ ಕೊಟ್ಟೆ ಅಂತಾನೂ ಗೊತ್ತು ನಮಗೆ'.

'ಸರ್, ನೀವು ಹೇಳಿದ್ದೆಲ್ಲಾನು ಸರಿ, ಆದರೆ ಕೊನೆ ಭಾಗ ತಪ್ಪು ಸರ್... ನಾನು ಅವತ್ತು ಧರ್ಮಸ್ಥಳಕ್ಕೆ ಹೋದೆ ಸರ್. ಅದಕ್ಕೆ ಪ್ರೂಫ್ ಇದೆ ಸರ್'.

'ಅದೂ ಗೊತ್ತು ನಮಗೆ. ಬೆಳಗ್ಗೆ ಇಲ್ಲಿ ಮಾಡಿದ ಪಾಪಕೃತ್ಯಾನ ಸಂಜೆ ಅಲ್ಲಿ ಹೋಗಿ ತೊಳೆಯೋದುಕ್ಕೆ ಅಂತ. ಈಗ ಹೇಳು, ಕೊಲೆಗೆ ಬಳಸಿದ ಆಯುಧ ಎಲ್ಲಿಟ್ಟಿದ್ದೀಯ ಅಂತ'.

'ಇಲ್ಲ ಸರ್, ನಾನು ಕೊಲೆ ಮಾಡಿಲ್ಲ'.

'ಕುಮಾರ್, ಇವನಿಗೆ ಏರೊಪ್ಲೇನ್ ಎತ್ತುತ್ತೀರೊ, ಲಾಳ ಕಟ್ಟೀರೊ, ಬೆಂಚ್ ಪ್ರೆಸ್ ಮಾಡ್ತೀರೊ, ಬಾಂಬೆ ಕಟ್ ಹಾಕ್ತೀರೊ ಗೊತ್ತಿಲ್ಲ, ನಾಳೆ ಬೆಳಗ್ಗೆಯೊಳಗೆ ಎಲ್ಲಾನು ಹೊರಗೆ ಬರಬೇಕು ಏನು. ಈಗ ಕರಕೊಂಡೋಗಿ ಇವನನ್ನ'.

'ಯೆಸ್ ಸಾರ್'.

'ವಿನಯ್‌ನ ಕರೀರಿ'.

ವಿನಯ್ ಬಾಗಿಲಿಗೆ ಬಂದ.

'ವಿನಯ್, ಸರಿಯಾಗಿ ಕೇಳುಸ್ಕೊಳಿ. ನಾಳೆ ಬೆಳಗ್ಗೆ ದಿನೇಶನ್ನ ಅವರ ಮನೆಗೆ ಕರ್ಕೊಂಡೋಗಿ ಪೂರ್ತಿ ತಪಾಸಣೆ ಮಾಡಬೇಕು, ಹಾಗೆ ಅವನ ಕಾರ್ ಕೂಡ... ಏನು... ಹಾಗೆ ಆ ರವಿ, ವಿನೋದ್, ಆ ಚಿಲ್ಲರೆ ಗಾಂಜಾ ವ್ಯಾಪಾರಿಗಳು, ಜಯಂತ್ ಮತ್ತು ದಿನೇಶ್ ಎಲ್ಲರನ್ನು ಬೇರೆ ಬೇರೆ ಇಡಿ. ಯಾರನ್ನೂ ಹೊಡಿಯೋದು ಬಡಿಯೋದು ಮಾಡಬೇಡಿ. ಆದರೆ ಚೆನ್ನಾಗಿ ಬೆದರಿಸಿ ನೋಡೋಣ'.

'ಯೆಸ್ ಸಾರ್'.

12

'ಸರ್... ಸಂಸ್ಕೃತಿ ಅನ್ನುವುದನ್ನು, ಅದರ ನೈಜ, ವಿಶಾಲ ಹಾಗೂ ವಿಸ್ತೃತ ಅರ್ಥದಲ್ಲಿ ಪರಿಗಣಿಸಿದರೆ ಬಹುಶಃ ನೀವು ನಾನು ವ್ಯಾಖ್ಯಾನಿಸುವ ರೀತಿಯನ್ನು ಒಪ್ಪಬಹುದು'.

'ಏಯ್ ಇರಯ್ಯ ಒಂದ್ನಿಮಿಷ... ಯೇಳಿದ್ದು ತಿಳಿಲಿಲ್ವ...' ಎನ್ನುತ್ತಾ ತಲೆಕೆರೆದುಕೊಂಡು ಎದ್ದು ಹೋದ ರಂಗಯ್ಯ ಅದ್ಯಾಕೊ ಎಷ್ಟು ಹೊತ್ತಾದರೂ ಮತ್ತೆ ಹಿಂತಿರುಗಿ ಬಂದಿರಲಿಲ್ಲ'.

ಜಯಂತನ ಮನದಾಳದಲ್ಲೆಲ್ಲೋ ಹುದುಗಿದ್ದ ಹಸಿ ಹಸಿ ನೆನಪುಗಳು ಸುರುಳಿ ಬಿಚ್ಚಿಕೊಂಡು ದಾಂಗುಡಿ ಎಬ್ಬಿಸುತ್ತಿತ್ತು. ಅದೊಂದು ಭಾನುವಾರದ ಬೆಳಿಗ್ಗೆ, ಯಾವುದೋ ಒಂದು ವಿಚಾರಗೋಷ್ಠಿಯಲ್ಲಿದ್ದಾಗ ಒಂದು ಸಂದೇಶ ಬಂದಿತ್ತು, ನಿಮ್ಮ ತಂದೆ ತಾಯಿ ಇದ್ದ ಕಾರಿಗೆ ರಸ್ತೆ ಅಪಘಾತವಾಗಿದೆ, ತಕ್ಷಣ ಚಿಕ್ಕಬಳ್ಳಾಪುರದ ಸರ್ಕಾರಿ ಆಸ್ಪತ್ರೆಗೆ ಹೊರಟು ಬನ್ನಿ ಎಂದು. ದಡಬಡನೆ ಅಲ್ಲಿಗೆ ಹೋದಾಗ ಬಾಗಿಲಲ್ಲೇ ಇದ್ದ ಪೊಲೀಸರು ಕರೆದುಕೊಂಡು ಹೋಗಿದ್ದು ವಾರ್ಡಿಗಲ್ಲ, ಶವಾಗಾರಕ್ಕೆ. ಅಡಿಯಿಂದ ಮುಡಿಯ ತನಕ ಹೊದಿಸಿದ್ದ ಬಿಳಿ ಬಟ್ಟೆಯನ್ನು ತೆಗೆಯುವ ಧೈರ್ಯವೇ ಆಗಿರಲಿಲ್ಲ. ಜಯಂತ್ ಧೈರ್ಯ ಮಾಡಿ ಮೇಲೊದಿಕೆಗಳನ್ನು ಮೆಲ್ಲಗೆ ಸರಿಸಿ ನೋಡಿದ ತಕ್ಷಣವೇ ತುಂಬಿಕೊಂಡ ಖಾಲಿತನ ಮತ್ತು ಕ್ಷೋಭೆ ಅವನನ್ನು ಮತ್ತೆಂದೂ ಅದರಿಂದಾಚೆಗೆ ಹೊರಬಾರದಂತೆ ಹೂತು ಹಾಕುವಂತಿತ್ತು. ಸ್ವಲ್ಪಮಟ್ಟಿಗಾದರೂ ಆ ಬೇಗೆಯನ್ನು ನೀಗಲು, ಕಾಲದ ಚಿಕಿತ್ಸಕ ಶಕ್ತಿಯ ಜೊತೆಗೆ, ಅಮ್ಮುನೇ ಬರಬೇಕಾಯಿತು ಅವನ ಜೀವನದಲ್ಲಿ.

ಮನೆಯ ಜಂಜಾಟ ಸ್ವಲ್ಪವೂ ತಾಗದಂತೆ, ಅಧ್ಯಯನಶೀಲನಾಗಿದ್ದ ಜಯಂತನಿಗೆ ಸಾರಸ್ವತ ಲೋಕದಲ್ಲಿ ಸ್ವಚ್ಛಂದವಾಗಿ ವಿಹರಿಸಲು ಅನುವು ಮಾಡಿಕೊಟ್ಟು, ಒಲುಮೆ ನಲುಮೆಗಳು ಸುರಿದು, ತುಂಬಿ, ಕಟ್ಟಿದ್ದ ಕುಟುಂಬ, ಇದ್ದಕ್ಕಿದ್ದಂತೆ ಇಲ್ಲವಾಗಿತ್ತು. ಧುತ್ತನೆ ಹೆಗಲ ಮೇಲೆ ಬಿದ್ದ, ಜಯಂತನ ತಂದೆಯೇ ನಿರ್ವಹಿಸುತ್ತಿದ್ದ ಫ್ಯಾಕ್ಟರಿಯ ಹೊರೆ ಒಂದು ಕಡೆಯಾದರೆ, ಇನ್ನೊಂದು ಕಡೆ ಖಾಲಿಯಾದ ಮನೆ ಮನಗಳನ್ನು ಸಂಭಾಳಿಸುವ ಹೊರೆ. ಈ ಎರಡೂ ಹೊರೆಗಳು ಒಟ್ಟಿಗೆ ಸೇರಿ ಜಯಂತನನ್ನು ಬಗ್ಗುಬಡಿದಿತ್ತು. ಹತಾಶೆಯ ಅಂಚಿನಲ್ಲಿ ಹಲುಬುತ್ತಾ ಸತ್ತಂತಿದ್ದವನಿಗೆ ಅಮೃತ ಸಿಂಚನವಾಗಿದ್ದು, ಹಿಂದಿನ ವರ್ಷದ ಸಂಕ್ರಾಂತಿಯ ದಿನ. ಅದರ ಮೂರು ದಿನಗಳ ಹಿಂದೆ ಡೈರೆಕ್ಟರ್ ದಿನೇಶನ ಸಹಾಯಕನೊಬ್ಬ ಜಯಂತನ ಫ್ಯಾಕ್ಟರಿಯಲ್ಲಿ ಟೀವಿ ಧಾರಾವಾಹಿಯ ಚಿತ್ರೀಕರಣ ಮಾಡಲು ಅನುಮತಿ ಕೇಳಿಕೊಂಡು ಬಂದಿದ್ದ. ಜಯಂತನ ಒಪ್ಪಿಗೆ ಪಡೆದ ನಂತರ ಇಡೀ ತಂಡ, ಮಾರನೇ ನಸುಕಿಗೇ ಬಂದಿಳಿದಿತ್ತು ಜೊತೆಗೆ ಅಮ್ಮು ಕೂಡ. ಚಿತ್ರೀಕರಣ ಘಟಕ ಇಡೀ ಫ್ಯಾಕ್ಟರಿ ಆವರಣವನ್ನು ಆಕ್ರಮಿಸಿಕೊಂಡು ಕ್ಲೋಸಪ್, ಲಾಂಗ್ ಶಾಟ್, ಟ್ರಾಲಿ, ಲೈಟಿಂಗ್, ಜೂಮ್ ಇನ್... ಹೀಗೆ ಅವರದೇ ಭಾಷೆಯಲ್ಲಿ ಜೋರಾಗಿ ಮಾತಾಡುತ್ತಾ, ಕೂಗಾಡುತ್ತಾ, ಓಡಾಡುತ್ತಾ ಇಡೀ ಜಾಗ ಸಂತೆಯಂತಾಗಿತ್ತು. ಈ ಸದ್ದುಗದ್ದಲಗಳಿಂದ ದೂರ ಉಳಿಯಲು ಜಯಂತ ಫ್ಯಾಕ್ಟರಿಯ ತನ್ನ ಖಾಸಗಿ ಕೋಣೆಯಲ್ಲಿ ಕೆಲಸ ಮಾಡುತ್ತಿದ್ದಾಗಲೇ ಮೃದುವಾದ ಧ್ವನಿಯಲ್ಲಿ–

'ಹಲೋ... ನಾನು ಅಮೃತಾ ಮುತ್ತಣ್ಣ. ಹೊರಗೆ ತುಂಬಾ ಗದ್ದಲ... ನಾನು ಇಲ್ಲಿ ಕುಳಿತುಕೊಂಡರೆ ನಿಮ್ಮದೇನು ಅಭ್ಯಂತರವಿಲ್ಲ ಅಂದುಕೊಳ್ತೀನಿ'.

'ಕುಳಿತುಕೊಳ್ಳಿ... ಏನು ಅಡ್ಡಿಯಿಲ್ಲ...'

'ಥ್ಯಾಂಕ್ಸ್...'

ಸರಳತೆ ಮತ್ತು ನಿರಾಡಂಬರತೆಯು, ಮೂರ್ತರೂಪ ತಳೆದಂತೆ ಕಂಡಿದ್ದಳು ಅಮೃತಾ ಮುತ್ತಣ್ಣ. ಪೀಠಿಕೆ ಪರಿಚಯಗಳ ನಂತರ ನಿರುಮ್ಮಳವಾಗಿ, ನಿರ್ಭಿಡೆಯಾಗಿ, ಎಷ್ಟೊ ವರ್ಷಗಳ ನಂತರ ಮತ್ತೆ ಭೇಟಿಯಾದ ಬಾಲ್ಯಸ್ನೇಹಿತರು ಬಿಗುಮಾನಗಳನ್ನು ಬದಿಗಿಟ್ಟು ಬೆಸೆದುಕೊಳ್ಳುವಂತೆ, ಮುಕ್ತವಾಗಿ, ನಗು ನಗುತ್ತಾ ಮಾತನಾಡುತ್ತಿದ್ದಳು ಅಮ್ಮು.

'ನಾನು ನಿಮ್ಮ ಧಾರಾವಾಹಿಯ ಕೆಲವು ಕಂತುಗಳನ್ನು ನೋಡಿದ್ದೇನೆ. ಬಹುಶಃ ಅದರ ಜೀವಾಳ, ನಿಮ್ಮ ಪಾತ್ರ ಮತ್ತು ನಿಮ್ಮ ಅದ್ಭುತ ನಟನೆ... ನಿಮ್ಮ ಪಾತ್ರದ ಒಳತೋಟಿಯನ್ನು ಸರಿಯಾಗಿ ಗ್ರಹಿಸಿ ಅದನ್ನು ಅನುಭಾನಾಗಿ ಅಭಿನಯಿಸುವಾಗ ವಿವಶರಾಗುವಂತೆ ಕಾಣುವಿರಿ... ಯು ಆರ್ ರಿಯಲಿ ಗಿಫ್ಟೆಡ್'.

'ದಯವಿಟ್ಟು ನಿಲ್ಲಿಸಬೇಡಿ... ಎಷ್ಟು ಹಿತವಾಗಿದೆ ನಿಮ್ಮ ಪ್ರಶಂಸೆ... ಅದರಲ್ಲೂ ನಿಮ್ಮಂಥ ರಸಗ್ರಾಹಿಗಳಿಂದ ಬಂದ ಪ್ರಶಂಸೆಗೆ ದುಪ್ಪಟ್ಟು ಬೆಲೆ'.

'ಡು ಯು ನೊ ಮಿ?'

'ಯೆಸ್ ಎ ಲಿಟಲ್... ನೀವು ಸೋಷಿಯಾಲಜಿನಲ್ಲಿ ರಿಸರ್ಚ್ ಮಾಡುವವರಿದ್ದೀರಿ ಅಂತ ಹೇಳುದ್ರು...'

'ನನ್ನ ಬಗ್ಗೆ ಒಂದಿಷ್ಟು ರಿಸರ್ಚ್ ಆಗಿದೆ ಅಂತ ಕಾಣುತ್ತೆ'.

ನಗುತ್ತಾ ಅಮ್ಮು, 'ನಿಮ್ಮ ಪ್ರಕಾರ ಒಳ್ಳೆಯ ನಟನೆ ಅಂದರೇನು?'

'ಲಕ್ಷ್ಯ... ಬಿಗಿ ತಪ್ಪದ ಲಕ್ಷ್ಯ... ನಿಲುವು, ಮುಖಭಾವ, ಆಂಗಿಕ, ಮಾತಿನ ಲಯ, ಎಲ್ಲವೂ ಪಾತ್ರ ಮತ್ತು ಸನ್ನಿವೇಶಕ್ಕೆ ಸರಿದೂಗುವಂತೆ ಏಕಮುಖಿಯಾಗಿ ಮೇಳೈಸಬೇಕು...'

'ಐ ಥಿಂಕ್ ಯು ಮೇಕ್ ದ ಕಟ್'.

'ಹೊಗಳಿಕೆಯಲ್ಲಿ ನೀವು ತುಂಬಾ ಧಾರಾಳ...'

'ಇದು ಉತ್ಪ್ರೇಕ್ಷೆಯಲ್ಲ ಅಮೃತಾ ಅವರೆ'

'ನೀವು ನನ್ನ ಅಮ್ಮು ಅಂತ ಕರೆಯಬಹುದು'

'ಐ ಶುಡ್ ಅಡ್ಮಿಟ್ ದಟ್ ಐ ಆಮ್ ಯುವರ್ ಅಡ್ಮೈರರ್...'

'ಹಾಗಾದರೆ ನೀವು ನನ್ನ ಆಟೊಗ್ರಾಫ್